Location of the Fifth Steel Plant

*Q.—198. SRI G. V. GOWDA (Palya):—

Will the Government be pleased to state:—

(*a*) whether the State Government have studied the report of the Anglo-American Consortium on the fifth steel plant;

(*b*) whether it is not a fact that the earlier studies made by an Indian Expert Team revealed that Hospet is the best site for the location of fifth steel plant;

(*c*) whether the Government of India is told that the facilities required for setting up the project would be available economically and in time at Hospet rather than at Visakhapatnam?

*A.—SRI K. MALLAPPA (Minister for Industries ad Commerce).—

(*a*) Yes.

(*b*) Government have no information.

(*c*) Yes.

SRI G. V. GOWDA.—Is it not a fact that even before the Anglo-American Consortium Team visited and gave a report, an Indian Expert Team also had its say in the matter?

†SRI K. MALLAPPA.—Not an Indian Expert Team. It was a team appointed by the Mysore Government, to prepare a sort of memorandum to help the visiting team and that memorandum has been given to the visiting team. They have considered it.

SRI G. V. GOWDA.—At what stge is the matter pending before the Government of India?

SRI K. MALLAPPA.—No final decision has yet taken place.

ಶ್ರೀ ಎಸ್. ಶಿವಪ್ಪ.—ಮೈಸೂರು ಸರ್ಕಾರದವರು ಈ 5ನೇ ಸ್ಟೀಲ್ ಪ್ಲಾಂಟನ್ನು ಎಲ್ಲಿ ಲೊಕೇಟು ಮಾಡಬೇಕು ಎನ್ನುವುದರ ಬಗ್ಗೆ, ತಜ್ಞರು ಬಂದಾಗ, ತಮ್ಮ ಮೈಸೂರ್ ಸ್ಟೇಟ್ ಕೈಗಾರಿ ಕೀಕರಣದ ತಯಾರುಮಾಡಿದ್ದ ವರದಿಯ ನಿಲುವನ್ನು ತಾವು ತೆಗೆದುಕೊಳ್ಳದೆ ಹೋದುದುಂಟ ಮತ್ತು ತಾವು ನಿರ್ದಿಷ್ಟ ನಿಲುವನ್ನು ತೆಗೆದುಕೊಳ್ಳದೆ ಒಂದು ಡೋಲಾಯಮಾನವಾದ ಮನೋಭಾವವನ್ನು ಹೊಂದಿದ್ದುದುಂಟ ಈ 5ನೇ ಸ್ಟೀಲ್ ಫ್ಯಾಕ್ಟರಿ ಬರುವುದಕ್ಕೆ ತಡವಾಯಿತಲ್ಲವೇ ? ಅದೂ ಅಲ್ಲದೆ ತಮ್ಮ ನಿಲುವನ್ನು ಕೇಂದ್ರ ಸರ್ಕಾರದ ಮುಂದೆ ಇಡುವಂತಹ ಕಾಲದಲ್ಲಿ ನಿರ್ದಿಷ್ಟವಾಗಿ 5ನೇ ಪ್ಲಾಂಟನ್ನು ಮೈಸೂರಿಗೇ ಕೊಡಬೇಕು ಎಂದು ಹೇಳುವ ಬದಲು ಮೈಸೂರಿಗೆ ಕೊಡಿ, ಆಂಧ್ರಕ್ಕೆ ಕೊಡಿ ಎಂದು ಹೇಳಿದ್ದರಿಂದ ಅಲ್ಲವೇ ತಡವಾದದ್ದು ?

SRI K. MALLAPPA.—The Government of India is definitely and unequivocally asked for a plant in Hospet. We have made a definite request to the Government of India to locate the plant at Hospet.

ಶ್ರೀ ಎಸ್. ಗೋಪಾಲ ಗೌಡ.—ಹೊಸಪೇಟೆಗೆ ಒಂದು ಊದುಕುಲುಮೆ ಸುವರ್ಣವನ್ನು ಕೊಟ್ಟರೆ ನಮಗೆ ಸಾಕು ಎನ್ನುವ ಅಭಿಪ್ರಾಯವನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದರು ಎಂದು ಹೇಳಿ ಹಿಂದೆ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಅದರ ನಿಜಾಂಶವೇನು ?

ಶ್ರೀ ಕೆ. ಮಲ್ಲಪ್ಪ.—ಅದು ನನ್ನ ತಿಳುವಳಿಕೆಗೆ ಬಂದಿಲ್ಲ

The attitude of the Government is that a major steel plant should be established at Hospet.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಶ್ರೀ ಗೋಪಾಲ ಗೌಡರು ಎಲ್ಲಿಯೋ ಕನಸುಕಂಡು ಕೇಳುತ್ತಿದ್ದಾರೆ. ಆ ವಿಚಾರವನ್ನೆಲ್ಲ ನನ್ನನ್ನು ಕೇಳಬೇಕಾಗಿತ್ತು. ಆ ರೀತಿ ನಾನು ಹೇಳಿಕೊಟ್ಟಿಲ್ಲ.

SRI S. M. KRISHNA.—Is the State Government contemplating any alternative arrangement byway of collaboration just as the Government of Madras is thinking. For example, the Government of Madras is interested in collaborating with certain Japanese firms. Is our State also contemplating any such alternative arrangement if the State Government does not get justice from the Central Government?

SRI K. MALLAPPA.—It is a hypothetical question. First of all the Central Government has to decide whether it will be located in Hospet or in some other place. In case the Central Government decides to have the factory in some other place, then we will have to think what we should do in the matter. In the meanwhile, so far as the statement made by Sri Sanjiva Reddy is concerned, he has said that in case the major plant goes to Vizagapatam, Hospet would be given a pig iron plant.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಆಂಧ್ರಕ್ಕೆ ಈ ಉಕ್ಕಿನ ಕಾರ್ಖಾನೆಯನ್ನು ಕೊಡಬೇಕು ಎಂದು ಆಗ್ಗೋ ಅಮೆರಿಕನ ಕಾನ್‌ಸೊರ್ಟಿಯಾನವರು ಹೇಳಿರುವುದನ್ನು ಒಪ್ಪಿಕ್ಕೊಳ್ಳಬೇಕು ಎಂದು ದಿಮಗತ ಲಾಲ್ ಬಹದ್ದೂರ್ ಶಾಸ್ತ್ರಿಯವರು ಆಂಧ್ರಕ್ಕೆ ಹೋಗಿದ್ದಾಗ ಹೇಳಿದ್ದು ನಿಜವಲ್ಲವೇ, ಸ್ವಾಮಿ ?

ಶ್ರೀ ಕೆ. ಮಲ್ಲಪ್ಪ.—ಒಪ್ಪಿಕೊಳ್ಳಬೇಕೆಂದು ಅವರು ಹೇಳಿಲ್ಲ. ತಮ್ಮಲ್ಲಿರುವ ಕೊಟ್ಟಿಗೆಕ್ಕಂಥ ಸಂದರ್ಭದಲ್ಲಿ ಆ ವರದಿಗೆ ಮನ್ನಣೆ ಕೊಡಬೇಕಾಗುತ್ತದೆ ಅದನ್ನು ವಿಚಾರ ಮಾಡಬೇಕಾಗುತ್ತದೆ, ಏನೇನೆ ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆಯೇ ವಿನಾ, ಆ ಕಾರ್ಖಾನೆ ವೈಜಾಗ್‌ನಲ್ಲಿಯೇ ಆಗಬೇಕು ಎಂದು ಹೇಳಿ ಪ್ರಧಾನ ಮಂತ್ರಿಯವರು ಒಪ್ಪಿಕೊಂಡು ಬಂದಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಈ 5ನೇ ಸ್ಟೀಲ್ ಪ್ಲಾಂಟನ್ನು ಹೊಸಪೇಟೆಗೆ ಕೊಡುವುದಕ್ಕೆ ಮೈಸೂರು ಸರ್ಕಾರ ಕೇಂದ್ರ ಸರ್ಕಾರವಮೇಲೆ ಪ್ರಭಾವವನ್ನು ಸಮಯಾ ಬೀರಲಿಲ್ಲ ಎನ್ನುವುದು ಕಾರಣ ವಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಅದು ಸರಿಯಲ್ಲ. ಪ್ರಭಾವ ಸಾಕಷ್ಟು ಬೀರಿದ್ದೇವೆ. ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಕೊಟ್ಟು, ಆ ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಪ್ರಕಾರ ಹೊಸಪೇಟೆಯು ಉತ್ತಮವಾದ ಸ್ಥಳವೆಂದು ನಾವು ಸಾಫ ಸಿದ್ದೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಸಂಜೀವರೆಡ್ಡಿಯವರು ಹೊಸಪೇಟೆಯಲ್ಲಿ ಸಣ್ಣ ಪ್ರಮಾಣದ ಒಂದು ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಸ್ಪಷ್ಟೀಕರಣವನ್ನು ತಮ್ಮ ಮುಂದೆ ಇಟ್ಟಾಗ ನಮ್ಮ ರಾಜ್ಯ ಸರ್ಕಾರದವರು ಒಪ್ಪಿಕೊಂಡಿದ್ದಾರೆಯೇ, ಹೇಗೆ ?

ಶ್ರೀ ಎಸ್. ನಿಜಲಿಂಗಪ್ಪ.—ಈ ರೀತಿ ಶ್ರೀ ಸಂಜೀವರೆಡ್ಡಿಯವರು ಹೇಳಿಲ್ಲ. ಅವರು ಹೇಳಿಲ್ಲ; ನಾವೂ ಸಹ ಒಪ್ಪಿಕೊಂಡಿಲ್ಲ.

SRI S. SIVAPPA.—In spite of the fact that the iron ore at Hospet is one of the richest in India, in spite of the fact that coal deposit is of the highest quality in India, in spite of power being available, why should not the Government of India declare that the Fifth Steel Plant will be located in Mysore State ?

SRI K. MALLAPPA.—We have made a strong case. In fact, all those points which my Hon'ble friend Sivappa has stated, have been placed before the Government of India ; water facilities, power facilities, facility of rich iron ore, availability of first grade limestone, manganese ; all these have been placed before the Central Government. The Central Government has yet to take a decision. They have not taken any final decision in the matter.

ಶ್ರೀ ಎಸ್. ಆರ್. ಕಿರಣಗಿ.—ಸ್ಟೀಲ್ ಪ್ಲಾಂಟನ್ನು ಬೈಲಹೊಂಗಲದಲ್ಲಿ ಸ್ಥಾಪಿಸುವುದರ ಬಗ್ಗೆ ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಯವರು ಯಾವ ಆಫೀಸ್ಯುವನ್ನೂ ಕೊಡದೆ, ತಮ್ಮ ನಿಲುವನ್ನು

ತಮ್ಮೊಳಗೆ ಇಟ್ಟುಕೊಂಡಿದ್ದರು. ವೈಶಾಕಪಟ್ಟಣಂ ಕೊಡಬಾರದು ಎಂದು ಅವರ ಅಭಿಪ್ರಾಯವಾಗಿತ್ತು. ಈಗ ಸರ್ಕಾರವೂ ಬದಲಾಗಿದೆ, ಸ್ಟೀಲ್ ಮಿನಿಸ್ಟ್ರಿಯೂ ಬದಲಾಗಿದೆ. ಆದುದರಿಂದ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಬದಲಾದ ಸರ್ಕಾರದಲ್ಲಿ ಹೋಗಿ ಸ್ಟೀಲ್ ಪ್ಲಾಂಟನ್ನು ಹೊಸಪೇಟೆಗೇ ಕೊಡಬೇಕೆಂದು ಒತ್ತಾಯ ಹಾಕಿ ಒರುತ್ತಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಸರ್ಕಾರ ಬದಲಾವಣೆಯಾಗಿಲ್ಲ. ಮಂತ್ರಿಮಂಡಳದಲ್ಲಿ ಸ್ವಲ್ಪ ಬದಲಾವಣೆ ಯಾಗಿದೆ. ಸರ್ಕಾರ ಅದೇ ಇರತಕ್ಕಂಥದ್ದು. ಸೆಂಟ್ರಲ್ ಕ್ಯಾಬಿನೆಟ್ ಈ ವಿಷಯವನ್ನು ವಿಚಾರ ಮಾಡ ಬೇಕಾಗಿದೆ. ಅವರು ಶೀಘ್ರದಲ್ಲಿಯೇ ವಿಮರ್ಶೆಮಾಡಿ ಒಂದು ತೀರ್ಮಾನಕ್ಕೆ ಬರುತ್ತಾರೆ, ನಾವು ಅವರ ತೀರ್ಮಾನ ಏನಾಗುತ್ತದೆ ಎಂದು ನಿರೀಕ್ಷಿಸುತ್ತಾ ಇದ್ದೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಕೇಂದ್ರದಲ್ಲಿ ನಮ್ಮ ಪ್ರಾತಿನಿಧ್ಯ ಸರಿಯಾಗಿ ಇಲ್ಲದೆ ಇರುವುದರಿಂದ ಮತ್ತು ಶ್ರೀ ಸಂಜೀವರೆಡ್ಡಿಯವರು ತಮ್ಮ ಸಂಸ್ಥಾನದಲ್ಲಿಯೇ ಉಕ್ಕಿನ ಕಾರ್ಖಾನೆ ಸ್ಥಾಪನೆಮಾಡಬೇಕೆಂದು ದೃಷ್ಟಿ ಇಟ್ಟುಕೊಂಡಿರುವುದರಿಂದ ಈ ವಾದವಿವಾದ ಬಂದಿದೆಯಲ್ಲವೆ ?

ಶ್ರೀ ಕೆ. ಮಲ್ಲಪ್ಪ.—ಯಾವ ತೀರ್ಮಾನವೂ ಆಗಿಲ್ಲ. ತೀರ್ಮಾನವಾಗಬೇಕಾಗಿದ್ದರೆ ಕೇಂದ್ರ ಸರ್ಕಾರದವರ ತೀರ್ಮಾನವಾಗಬೇಕಾಗಿದೆ. ನಮ್ಮ ಮಟ್ಟಿಗೆ ಹೇಳುವುದಾದರೆ, ನಾವು ಸ್ಟ್ರಾಂಗ್ ಕೇಸ್ ಮಾಡಿದ್ದೇವೆ. ನಮ್ಮ ಕೇಸನ್ನು ಎಷ್ಟರಮಟ್ಟಿಗೆ ಪುಷ್ಟೀಕರಿಸಬೇಕೋ ಅಷ್ಟರಮಟ್ಟಿಗೆ ಪುಷ್ಟೀಕರಿಸಿದ್ದೇವೆ. ಇವಕ್ಕಿಂತ ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಿಲ್ಲ ಅಂತ ಹೇಳುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ.—ಇಂತಹ ಸಂದರ್ಭಗಳಲ್ಲಿ ಎಷ್ಟು ಅಂಕ ಸಂಖ್ಯೆಗಳನ್ನು ಕೊಟ್ಟಿದ್ದರೂ ಕೂಡ ರಾಜಕೀಯ ಒತ್ತಡಗಳ ಪರಿಣಾಮದಿಂದ ಹೀಗಾಗುತ್ತದೆಯಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ನಾವು ಎಲ್ಲರೀತಿಯಾದ ಒತ್ತಡವನ್ನೂ ತಂದಿದ್ದೇವೆ ಮತ್ತು ಅವಕ್ಕೆ ಬೇಕಾಗುವ ಅಂಕಿ ಸಂಖ್ಯೆಗಳನ್ನೂ ಕೊಟ್ಟಿದ್ದೇವೆ. ಅವರೂಕೂಡ ನ್ಯಾಯ ಹಾಗೂ ಧರ್ಮದ ದೃಷ್ಟಿ ಇಟ್ಟುಕೊಂಡು ಇವರ ಮೇಲೆ ತೀರ್ಮಾನ ತೆಗೆದುಕೊಳ್ಳಬಹುದು ಎನ್ನುವ ಆಶಯ ನಮಗೆ ಇದೆ.

ಶ್ರೀ ಆರ್ ಎನ್. ಲಕ್ಷ್ಮೀಪತಿ.—ಕೇಂದ್ರ ಸರಕಾರದವರು ವಿಶಾಖಪಟ್ಟಣದಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆಮಾಡಿ ಇಲ್ಲಿ ಆಗದೆ ಹೋದರೆ ನಮ್ಮ ಸರಕಾರವೇ ಒಂದು ಉಕ್ಕಿನ ಕಾರ್ಖಾನೆಯನ್ನು ಹೊಸಪೇಟೆಯ ಬಳಿ ಮಾಡುತ್ತೇವೆಂದು ಹೇಳಿದಿರಿ. ಇದರ ಬಗ್ಗೆ ಇಲ್ಲಿಯವರೆಗೆ ಸರಕಾರ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡು ಸಿದ್ಧರಾಗಿದ್ದಾರೆ.

ಶ್ರೀ ಕೆ. ಮಲ್ಲಪ್ಪ.—ನಮಗೆ ಸಿಗುವುದಿಲ್ಲ ಎನ್ನುವದರ ತೀರ್ಮಾನ ಇನ್ನೂ ಬಂದಿಲ್ಲ. ಅದು ಬರುವುದಕ್ಕೆ ಮುಂಚೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡರೆ ಆಗ ನಮಗೆ ಅನುಕೂಲವಾಗುವುದಕ್ಕೆ ಬದಲಿಗೆ ತೊಂದರೆ ಯಾಗುತ್ತದೆ.

ಶ್ರೀ ಜಿ. ವಿ. ಗೌಡ.—ಅನೇಕ ವಿಚಾರಗಳಲ್ಲಿ ಕೇಂದ್ರದವರಿಂದ ಮೈಸೂರು ದೇಶಕ್ಕೆ ಬಹಳ ಅನ್ಯಾಯ ವಾಗಿದೆ ಎನ್ನುವುದನ್ನು ಕೇಂದ್ರದವರಿಗೆ ಚೆನ್ನಾಗಿ ಮನವರಿಕೆ ಮಾಡಿಕೊಟ್ಟಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಎಷ್ಟಮಟ್ಟಿಗೆ ಮಾಡಬೇಕೋ ಅಷ್ಟನ್ನೂ ಮಾಡಿದ್ದೇವೆ. ಅವರಿಂದ ಅವರಿಗೂ ಇಲ್ಲಿನ ಪರಿಸ್ಥಿತಿ ಮನವರಿಕೆಯಾಗಿದೆ. ಅವರ ಅಂತಿಮ ತೀರ್ಮಾನ ಬರುವವರೆಗೆ ನಾವೇನೂ ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಲಕ್ಕಪ್ಪ.—ಮೈಸೂರು ರಾಜ್ಯದಲ್ಲಿ ಹೊಸಪೇಟೆಯಲ್ಲೇ ಉಕ್ಕಿನ ಕಾರ್ಖಾನೆಯಾಗಬೇಕೆಂಬ ಜನರ ಅಭಿಪ್ರಾಯವಿರುವುದರಿಂದ ಕೇಂದ್ರದ ಮೇಲೆ ಚೆನ್ನಾಗಿ ಒತ್ತಾಯಮಾಡಲು ಈಗಿರುವ ಈ ಶಾಸನ ಸಭೆಯ ಎಲ್ಲ ಸದಸ್ಯರುಗಳೂ ಮತ್ತು ಮಂತ್ರಿಮಂಡಲದವರೂ ಕೂಡಲೇ ರಾಜೀನಾಮೆ ಕೊಟ್ಟು ನಮ್ಮ ಪ್ರತಿಭಟನೆಯನ್ನು ಒತ್ತಾಯಪೂರ್ವಕವಾಗಿ ಮಾಡಿದರೆ ಕೇಂದ್ರದವರ ಗಮನ ಸೆಳೆಯಲು ಅನುಕೂಲ ವಾಗುವುದಿಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಕೇಂದ್ರದ ತೀರ್ಮಾನ ಏನು ಎನ್ನುವುದೇ ನಮಗೆ ಬಾರದೆ ನಾವೇನು ಕ್ರಮತೆಗೆದು ಕೊಳ್ಳುವುದಕ್ಕೆ ಆಗುತ್ತದೆ ? ಆದರಿಂದೇನೂ ಆಗುವುದಿಲ್ಲ. ಕೇಂದ್ರಕ್ಕೆ ಬೇಕಾಗುವ ಎಲ್ಲ ವಿವರಗಳನ್ನೂ ಪೂರ್ತಿ ಕೊಡಲಾಗಿದೆ. ಆದರ ಮೇಲೆ ಅವರ ತೀರ್ಮಾನವೇನು ಎಂದು ಕಾದು ನೋಡಬೇಕಾಗಿದೆ. ಹಾಗೆ ಮಾಡದೆ ರಾಜೀನಾಮೆ ಕೊಡುವುದು ಎಂದರೆ ಅದು ಸರಿಯಾಗಿರುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೊಸಪೇಟೆಯಲ್ಲಿ ಸ್ಟೀಲ್ ಪ್ಲಾಂಟನ್ನು ಸ್ಥಾಪನೆಮಾಡಲು ಹಿಂದೆ ಇದ್ದ ಅಡ್ಡಿ ಆತಂಕಗಳು ಈಗ ಸ್ವಲ್ಪ ದೂರವಾಗಿರುವುದರಿಂದ ಈಗ ಕೇಂದ್ರದ ಮೇಲೆ ಒತ್ತಾಯ ಮಾಡಿದರೆ ಇದು ಬರುವ ಭರವಸೆ ಇದೆ ಅಲ್ಲವೆ ?

(No answer)